## ಕರ್ನಾಟಕ ಕೃಷಿ ಸಂಬಂಧಿ ಕೀಟಗಳು ಮತ್ತು ರೋಗಗಳ ನಿಯಮಗಳು, 1971

### ವಿಷಯಾನುಕ್ರಮಣಿಕೆ


1. ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು
3. ನೋಟೀಸುಗಳು
4. ಪ್ರತಿಬಂಧಕ ಮತ್ತು ಪರಿಹಾರ ಕ್ರಮಗಳ ವೆಚ್ಚ
5. ಅಪೀಲುಗಳು
6. ನಮೂನೆ 1 ರಿಂದ 6

## ಕೃಷಿ ಮತ್ತು ಅರಣ್ಯ ಸಚಿವಾಲಯ

# ಕರ್ನಾಟಕ ಕೃಷಿ ಸಂಬಂಧಿ ಕೀಟಗಳು ಮತ್ತು ರೋಗಗಳ ನಿಯಮಗಳು, 1971

**(ಜಿಎಸ್ಆರ್ 260, ದಿನಾಂಕ 3-8-1974 ಮತ್ತು ಜಿಎಸ್ಆರ್ 294, ದಿನಾಂಕ29-9-1980 ರ ಮೂಲಕ ತಿದ್ದುಪಡಿಯಾದಂತೆ)**

**ಜಿ.ಎಸ್.ಆರ್. 325.** ಕರ್ನಾಟಕ ಕೃಷಿ ಸಂಬಂಧಿ ಕೀಟಗಳ ಮತ್ತು ರೋಗಗಳ ಅಧಿನಿಯಮ, 1968ರ 20ನೇ ಪ್ರಕರಣದ ಮೂಲಕ ಅಗತ್ಯಪಡಿಸಿದಂತೆ, ಕರ್ನಾಟಕ ಕೃಷಿ ಸಂಬಂಧಿ ಕೀಟಗಳು ಮತ್ತು ರೋಗಗಳ ನಿಯಮಗಳು, 1971 ಇದರ ಕರಡನ್ನು, ಅದರಿಂದ ಬಾಧಿತರಾಗುವ ಸಂಭವವಿರುವ ಎಲ್ಲಾ ವ್ಯಕ್ತಿಗಳಿಂದ 1971ರ ಆಗಸ್ಟ್ 31ರಂದು ಅಥವಾ ಅದಕ್ಕೂ ಮೊದಲು ಆಕ್ಷೇಪಗಳು ಮತ್ತು ಸಲಹೆಗಳನ್ನು ಆಹ್ವಾನಿಸಿ, ಅಧಿಸೂಚನೆ ಸಂ.ಜಿ.ಎಸ್.ಆರ್ 224 (ಎಎಫ್ 142 ಎಎಮ್ಎಸ್ 69) ದಿನಾಂಕ 14:16ನೇ ಜುಲೈ 1971ರಲ್ಲಿ 22ನೇ ಜುಲೈ 1971ರ ದಿನಾಂಕದ ಕರ್ನಾಟಕ ರಾಜಪತ್ರದಲ್ಲಿ ಪ್ರಕಟಿಸಿದ್ದರಿಂದ;

ಮತ್ತು ಸದರಿ ರಾಜಪತ್ರವನ್ನು 1971ರ ಜುಲೈ 22 ರಂದು ಸಾರ್ವಜನಿಕರಿಗೆ ದೊರಕುವಂತೆ ಮಾಡಿದ್ದರಿಂದ;

ಮತ್ತು, ಸದರಿ ಕರಡಿಗೆ ಆಕ್ಷೇಪಗಳು ಅಥವಾ ಸಲಹೆಗಳು ಬಾರದೆ ಇದ್ದುದರಿಂದ;

ಈಗ ಕರ್ನಾಟಕ ಕೃಷಿ ಸಂಬಂಧಿ ಕೀಟಗಳು ಮತ್ತು ರೋಗಗಳ ಅಧಿನಿಯಮ, 1968 (1969ರ ಕರ್ನಾಟಕ ಅಧಿನಿಯಮ ಸಂಖ್ಯೆ 1)ರ 20ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಎಂದರೆ:-

**1. ಹೆಸರು ಮತ್ತು ಪ್ರಾರಂಭ.-** (1) ಈ ನಿಯಮಗಳನ್ನು ಕರ್ನಾಟಕ ಕೃಷಿ ಸಂಬಂಧಿ ಕೀಟಗಳು ಮತ್ತು ರೋಗಗಳ ನಿಯಮಗಳು, 1971 ಎಂದು ಕರೆಯತಕ್ಕದ್ದು.

(2) ಅವು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.-** ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಅಧಿನಿಯಮ" ಎಂದರೆ ಕರ್ನಾಟಕ ಕೃಷಿ ಸಂಬಂಧಿ ಕೀಟಗಳ ಮತ್ತು ರೋಗಗಳ ಅಧಿನಿಯಮ, 1968;

(ಬಿ) "ನಮೂನೆ" ಎಂದರೆ, ಈ ನಿಯಮಗಳಿಗೆ ಲಗತ್ತಿಸಲಾದ ನಮೂನೆ;

(ಸಿ) "ಪ್ರಕರಣ" ಎಂದರೆ ಈ ಅಧಿನಿಯಮದ ಪ್ರಕರಣ.

**3. ನೋಟೀಸುಗಳು.-** (1) 6ನೇ ಪ್ರಕರಣದ ಮೇರೆಗಿನ ನೋಟೀಸು ನಮೂನೆ 1 ರಲ್ಲಿರತಕ್ಕದ್ದು ಮತ್ತು ಪರಿಶೀಲನಾಧಿಕಾರಿಯು 6ನೇ ಪ್ರಕರಣದ ಮೇರೆಗೆ ಕೊಡಲಾದ ನೋಟೀಸುಗಳ ರಿಜಿಸ್ಟರನ್ನು ನಮೂನೆ 4 ರಲ್ಲಿ ಇಡತಕ್ಕದ್ದು.

(2) 8ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗಿನ ನೋಟೀಸು ನಮೂನೆ 2 ರಲ್ಲಿರತಕ್ಕದ್ದು ಮತ್ತು ಪರಿಶೀಲನಾಧಿಕಾರಿಯು 8ನೇ ಪ್ರಕರಣದ ಮೇರೆಗೆ ಕೊಡಲಾದ ನೋಟೀಸುಗಳ ರಿಜಿಸ್ಟರನ್ನು ನಮೂನೆ 5 ರಲ್ಲಿ ಇಡತಕ್ಕದ್ದು.

(3) 7ನೇ ಪ್ರಕರಣ ಅಥವಾ 9ನೇ ಪ್ರಕರಣದ ಮೇರೆಗಿನ ಯಾವುದೇ ಪ್ರತಿಬಂಧಕ ಅಥವಾ ಪರಿಹಾರ ಕ್ರಮಗಳ ವೆಚ್ಚಗಳ ತಗಾದೆ ನೋಟೀಸು ನಮೂನೆ 3ರಲ್ಲಿರತಕ್ಕದ್ದು.

(4) 8ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗಿನ ನೋಟೀಸನ್ನು ಮತ್ತು 10ನೇ ಪ್ರಕರಣದ ಮೇರೆಗಿನ ತಗಾದೆ ನೋಟೀಸನ್ನು, ನೋಟೀಸಿನ ದ್ವಿಪ್ರತಿಗಳಲ್ಲೊಂದನ್ನು ಅಧಿಭೋಗದಾರನಿಗೆ ಖುದ್ದಾಗಿ ತಲುಪಿಸುವ ಅಥವಾ ಕೊಡುವ ಮೂಲಕ, ಅಥವಾ ಅವನ ಕುಟುಂಬದ ಯಾರೇ ಒಬ್ಬ ವಯಸ್ಕ ಪುರುಷ ಸದಸ್ಯನ ಅಥವಾ ಒಬ್ಬ ಅಧಿಕೃತ ಏಜಂಟನ ಬಳಿ ನಕಲುಗಳಲ್ಲಿ ಒಂದನ್ನು ಕೊಡುವ ಮೂಲಕ ಅಥವಾ ಅಧಿಭೋಗದಾರನು ಸಾಮಾನ್ಯವಾಗಿ ವಾಸಿಸುವ ಮನೆಯ ಯಾವುದೇ ಎದ್ದುಕಾಣುವ ಭಾಗದ ಮೇಲೆ ನೋಟೀಸಿನ ನಕಲುಗಳಲ್ಲಿ ಒಂದನ್ನು ಅಂಟಿಸುವ ಮೂಲಕ ಜಾರಿ ಮಾಡತಕ್ಕದ್ದು ಮತ್ತು ಆ ತರುವಾಯ ನೋಟೀಸನ್ನು ಅಧಿಭೋಗದಾರನಿಗೆ ಕ್ರಮಬದ್ಧವಾಗಿ ಜಾರಿಮಾಡಲಾಗಿದೆಯೆಂದು ಭಾವಿಸತಕ್ಕದ್ದು.

[1][(5) 7ನೇ ಮತ್ತು 9ನೇ ಪ್ರಕರಣಗಳ ಮೇರೆಗೆ ಕೈಗೊಂಡ ಪ್ರತಿಬಂಧಕ ಅಥವಾ ಪರಿಹಾರಗಳ, 10ನೇ ಪ್ರಕರಣದ ಮೇರೆಗೆ ಭೂಕಂದಾಯದ ಬಾಕಿಯಂತೆ ವಸೂಲು ಮಾಡಬಹುದಾದ, ವೆಚ್ಚದ ತಗಾದೆಯನ್ನು ತೋರಿಸುವ ತಃಖ್ತೆಯು 6ನೇ ನಮೂನೆಯಲ್ಲಿರತಕ್ಕದ್ದು.][1]

1. "ಕೃಷಿ ನಿರ್ದೇಶಕರು" ಎಂಬ ಪದಗಳಿಗೆ ಬದಲಾಗಿ ಜಿ.ಎಸ್.ಆರ್ 260 ದಿನಾಂಕ 3.8.1974ರ ಮೂಲಕ 19.9.1974 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**4. ಪ್ರತಿಬಂಧಕ ಮತ್ತು ಪರಿಹಾರ ಕ್ರಮಗಳ ವೆಚ್ಚ.-** 7ನೇ ಪ್ರಕರಣದ ಅಥವಾ 9ನೇ ಪ್ರಕರಣದ ಮೇರೆಗೆ ಕಾರ್ಯಗತಗೊಳಿಸಲಾದ ಯಾವುದೇ ಪ್ರತಿಬಂಧಕ ಅಥವಾ ಪರಿಹಾರ ಕ್ರಮಗಳ ವೆಚ್ಚವನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಪ್ರಚಲಿತ ಮಾರುಕಟ್ಟೆ ದರಗಳಲ್ಲಿ ಮಜೂರಿಗಳು, ಸಾಮಗ್ರಿ, ಉಪಕರಣಗಳ ಬಳಕೆ ಮತ್ತು ಅಂಥ ಇತರ ಸಂಬಂಧಪಟ್ಟ ಸಂಗತಿಗಳನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು.

**5. ಅಪೀಲುಗಳು.-** (1) [1][ಸಂಬಂಧಪಟ್ಟ ಕೃಷಿ ವಿಭಾಗೀಯ ಜಂಟಿ ನಿರ್ದೇಶಕರು][1] 8 ಮತ್ತು 11ನೇ ಪ್ರಕರಣಗಳ ಉದ್ದೇಶಗಳಿಗಾಗಿ ನಿಯಮಿಸಲಾದ ಪ್ರಾಧಿಕಾರಿಯಾಗಿರತಕ್ಕದ್ದು.

1. "ಕೃಷಿ ನಿರ್ದೇಶಕರು" ಎಂಬ ಪದಗಳಿಗೆ ಬದಲಾಗಿ ಜಿ.ಎಸ್.ಆರ್ 260 ದಿನಾಂಕ 3.8.1974ರ ಮೂಲಕ 19.9.1974 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) 8ನೇ ಪ್ರಕರಣದ ಮೇರೆಗಿನ ಅಪೀಲು, ಪರಿಶೀಲನಾಧಿಕಾರಿಯು ಅಪೀಲುದಾರನ ಮೇಲೆ ಜಾರಿಮಾಡಿದ ಮೂಲ ನೋಟೀಸಿನ ಜೊತೆಗೆ ಇರತಕ್ಕದ್ದು.

(3) 11ನೇ ಪ್ರಕರಣದ ಮೇರೆಗಿನ ಅಪೀಲು, ಅಧಿಭೋಗದಾರನ ಮೇಲೆ ಜಾರಿಮಾಡಿದ ಮೂಲ ತಗಾದೆ ನೋಟೀಸಿನ ಜೊತೆಗೆ ಇರತಕ್ಕದ್ದು.

(4) ಅಪೀಲು ಪ್ರಾಧಿಕಾರವು, ಅಪೀಲುದಾರನಿಗೆ 8ನೇ ಪ್ರಕರಣದ (3)ನೇ ಉಪ-ಪ್ರಕರಣ ಮತ್ತು 11ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ತಾನು ಹೊರಡಿಸಿದ ಆದೇಶದ ಒಂದು ಪ್ರತಿಯನ್ನು ಕೊಡತಕ್ಕದ್ದು.

* * *

## ನಮೂನೆ - 1
## (3ನೇ ನಿಯಮವನ್ನು ನೋಡಿ)

ಗೆ,

.....................

ಕರ್ನಾಟಕ ಕೃಷಿ ಸಂಬಂಧಿ ಕೀಟಗಳ ಮತ್ತು ರೋಗಗಳ ಅಧಿನಿಯಮ, 1968 (1969ರ ಕರ್ನಾಟಕ ಅಧಿನಿಯಮ ಸಂ.1)ರ 3ನೇ ಪ್ರಕರಣದ ಮೇರೆಗೆ ಹೊರಡಿಸಿದ ................ ದಿನಾಂಕ .................... ಕ್ರಮಾಂಕದ ಮತ್ತು ..................... ದಿನಾಂಕದ ರಾಜಪತ್ರದಲ್ಲಿ ಪ್ರಕಟಿಸಲಾದಂಥ ಅಧಿಸೂಚನೆಯಲ್ಲಿ ನಮೂದಿಸಲಾದಂತೆ.-

(i) ಅಂಥ ಭೂಮಿ, ನೀರು ಅಥವಾ ಆವರಣದಲ್ಲಿ ಯಾವುದೇ ಹಾನಿಕರ ಕಳೆ, ಪರೋಪಜೀವಿ, ಉಪದ್ರವ ಕೀಟಗಳು ಅಥವಾ ಸಸ್ಯರೋಗವು ಕಾಣಿಸಿ ಕೊಂಡಿದೆಯೇ; ಮತ್ತು

(ii) ಪಾಲಿಸಬೇಕೆಂದು ನಿರ್ದೇಶಿಸಲಾದ ಪ್ರತಿಬಂಧಕ ಅಥವಾ ಪರಿಹಾರಕ ಕ್ರಮಗಳನ್ನು ಪಾಲಿಸಲಾಗಿದೆಯೇ ಇಲ್ಲವೇ

- ಎಂಬುದನ್ನು ಖಚಿತಪಡಿಸಿಕೊಳ್ಳುವ ಉದ್ದೇಶಕ್ಕಾಗಿ ನಿಮ್ಮ ಮೇಲೆ ನೋಟೀಸನ್ನು ಜಾರಿಮಾಡಿದ ಕಾಲದಿಂದ (ಕಾಲದ ಅವಧಿಯನ್ನು ನಿರ್ದಿಷ್ಟಪಡಿಸಿ) .................. ರ ತರುವಾಯ ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಭೂಮಿ ಅಥವಾ ಆವರಣದ ಮೇಲೆ ಈ ಕೆಳಗೆ ಸಹಿಮಾಡಿರುವವರು ಪ್ರವೇಶಿಸುತ್ತಾರೆ ಎಂದು ಸದರಿ ಅಧಿನಿಯಮದ 6ನೇ ಪ್ರಕರಣದ ಮೇರೆಗೆ ಈ ನೋಟೀಸಿನ ಮೂಲಕ ತಿಳಿಸಲಾಗಿದೆ.

**ಅನುಸೂಚಿ**

(* * *)

(* * *) ಇಲ್ಲಿ ಭೂಮಿ ಅಥವಾ ಆವರಣದ ವಿವರಗಳನ್ನು ನಮೂದಿಸಿ.

ದಿನಾಂಕ ..................                                        ಪರಿಶೀಲನಾಧಿಕಾರಿ.

## ನಮೂನೆ - 2

**(3ನೇ ನಿಯಮವನ್ನು ನೋಡಿ)**

ಗೆ,

....................

ತಮ್ಮ ಭೂಮಿ ಅಥವಾ ಆವರಣವನ್ನು ಪರಿಶೀಲಿಸಿದ ಮೇಲೆ,

(1) ತಮ್ಮ ಸದರಿ ಭೂಮಿ ಅಥವಾ ಆವರಣದ ಮೇಲೆ ....................... (ಇಲ್ಲಿ ಕೀಟಗಳ, ಸಸ್ಯರೋಗಗಳ ಅಥವಾ ಹಾನಿಕರ ಕಳೆಗಳ ಹೆಸರನ್ನು ನಮೂದಿಸಿ) ಕಾಣಿಸಿ ಕೊಂಡಿದೆಯೆಂಬುದು;

(2) ಕರ್ನಾಟಕ ಕೃಷಿ ಸಂಬಂಧಿ ಕೀಟಗಳ ಮತ್ತು ರೋಗಗಳ ಅಧಿನಿಯಮ, 1968 (1969ರ ಕರ್ನಾಟಕ ಅಧಿನಿಯಮ ಸಂ.1)ರ 3ನೇ ಪ್ರಕರಣದ ಮೇರೆಗೆ ಹೊರಡಿಸಲಾದ .................. ದಿನಾಂಕದ ..................... ಕ್ರಮಾಂಕದ ಮತ್ತು ................... ದಿನಾಂಕದ ರಾಜ್ಯಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆಯಲ್ಲಿ ನಮೂದಿಸಿದ ಪ್ರತಿಬಂಧಕ ಅಥವಾ ಪರಿಹಾರ ಕ್ರಮಗಳನ್ನು ತಾವು ಕೈಗೊಂಡಿಲ್ಲವೆಂಬುದು ಗಮನಕ್ಕೆ ಬಂದಿರುವುದರಿಂದ;

ಈಗ, ಸದರಿ ಅಧಿನಿಯಮದ 8ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಈ ನೋಟೀಸನ್ನು ಸ್ವೀಕರಿಸಿದ ................ ದಿನಗಳೊಳಗಾಗಿ ಈ ಕೆಳಕಂಡ ಪ್ರತಿಬಂಧಕ ಅಥವಾ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕೆಂದು ನಾನು ಈ ಮೂಲಕ ಈಗ ತಮ್ಮನ್ನು ಅಗತ್ಯಪಡಿಸುತ್ತಿದ್ದೇನೆ, ಎಂದರೆ,

(ಇಲ್ಲಿ ಸಂದರ್ಭಾನುಸಾರ, ಪ್ರತಿಬಂಧಕ / ಪರಿಹಾರ ಕ್ರಮಗಳ ಸ್ವರೂಪವನ್ನು ನಮೂದಿಸಿ)

ದಿನಾಂಕ:
ಪರಿಶೀಲನಾಧಿಕಾರಿ.

## ನಮೂನೆ - 3

**(3ನೇ ನಿಯಮವನ್ನು ನೋಡಿ)**

ಗೆ, ....................

................... ದಿನಾಂಕದ ನೋಟೀಸು ಸಂಖ್ಯೆ .................. ರ ಮೂಲಕ ಸದರಿ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಪ್ರತಿಬಂಧಕ ಅಥವಾ ಪರಿಹಾರ ಕ್ರಮಗಳನ್ನು ಕೈಗೊಳ್ಳುವಂತೆ ತಮಗೆ ಅಗತ್ಯಪಡಿಸಿದ್ದುದರಿಂದ;

ಮತ್ತು, ಸದರಿ ನೋಟೀಸಿನಲ್ಲಿ ಅಥವಾ ತಾವು ಸಲ್ಲಿಸಿದ ಅಪೀಲಿನ ಮೇಲೆ ಮಾಡಿದ ಆದೇಶದಲ್ಲಿ ನಿರ್ದಿಷ್ಟಪಡಿಸಿದ ಕಾಲದೊಳಗೆ ಸದರಿ ನೋಟೀಸನ್ನು ತಾವು ಪಾಲಿಸದೆ ಇರುವುದರಿಂದ;

ಮತ್ತು, ಸದರಿ ನೋಟೀಸು ಅಥವಾ ಆದೇಶದಲ್ಲಿ ನಮೂದಿಸಿದ ಪ್ರತಿಬಂಧಕ ಅಥವಾ ಪರಿಹಾರ ಕ್ರಮಗಳನ್ನು ಕರ್ನಾಟಕ ಕೃಷಿ ಸಂಬಂಧಿ ಕೀಟಗಳು ಮತ್ತು ರೋಗಗಳ ಅಧಿನಿಯಮ, 1968 (1969ರ ಕರ್ನಾಟಕ ಅಧಿನಿಯಮ ಸಂ.1)ರ 7 ಅಥವಾ 9ನೇ ಪ್ರಕರಣಗಳ ಮೂಲಕ ಅಗತ್ಯಪಡಿಸಲಾದಂತೆ ಕೆಳಗೆ ಸಹಿಮಾಡಿದವರು ಅಥವಾ ಕೆಳಗೆ ಸಹಿ ಮಾಡಿದವರ ಮೇಲ್ವಿಚಾರಣೆಯಲ್ಲಿ ಕೈಗೊಂಡಿರುವುದರಿಂದ;

ಮತ್ತು, ಸದರಿ ಪ್ರತಿಬಂಧಕ ಅಥವಾ ಪರಿಹಾರ ಕ್ರಮಗಳಿಗೆ ವೆಚ್ಚವಾಗಿರುವ ........ ರೂ. ಗಳನ್ನು ತಾವು ಸಂದಾಯ ಮಾಡಬೇಕಾಗಿರುವುದರಿಂದ; (ಅದರ ವಿವರಗಳನ್ನು ಈ ಕೆಳಗೆ ನೀಡಲಾಗಿದೆ)

ಈಗ, ಸದರಿ ಅಧಿನಿಯಮದ 10ನೇ ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ಈ ನೋಟೀಸಿನ ದಿನಾಂಕದಿಂದ ................ ದಿನಗಳೊಳಗಾಗಿ ................ ರೂ. ಗಳ ಸದರಿ ಮೊತ್ತವನ್ನು ಸಂದಾಯ ಮಾಡುವಂತೆ ತಮ್ಮನ್ನು ಈ ಮೂಲಕ ಅಗತ್ಯಪಡಿಸಲಾಗಿದೆ.

(ಇಲ್ಲಿ ಪ್ರತಿಬಂಧಕ ಅಥವಾ ಪರಿಹಾರ ಕ್ರಮದ ವೆಚ್ಚಗಳ ತಗಾದೆಯ ವಿವರಗಳನ್ನು ನಿರ್ದಿಷ್ಟಪಡಿಸಿ).

ದಿನಾಂಕ: ಪರಿಶೀಲನಾಧಿಕಾರಿ.

## ನಮೂನೆ - 4
(3ನೇ ನಿಯಮವನ್ನು ನೋಡಿ)

**ಕ್ರಮ ಸಂಖ್ಯೆ:**

1. ಗ್ರಾಮ
2. ಹೋಬಳಿ, ತಾಲೂಕು
3. ನೋಟೀಸಿಗೆ ಸಂಬಂಧಿಸಿದ ಸರ್ವೆ ನಂ. ಉಪ-ವಿಭಾಗ ಸಂ.
4. ಅಧಿಭೋಗದಾರನ ಹೆಸರು
5. ನಾಶಪಡಿಸಬೇಕಾದ ಸಸ್ಯಗಳು ಅಥವಾ ಸಸ್ಯಗಳ ಭಾಗಗಳು ಅಥವಾ ಕ್ರಿಮಿಕೀಟಗಳ ವಿವರಣೆ
6. ನೋಟೀಸನ್ನು ಜಾರಿ ಮಾಡಿದ ದಿನಾಂಕ
7. ಜಾರಿ ಮಾಡಿದವರು
8. ಅಪೀಲು ಅವಧಿಯ ಮುಕ್ತಾಯದ ದಿನಾಂಕ
9. ಅಪೀಲು ಅಧಿಕಾರಿಯ ಆದೇಶ
10. ಪರಿಶೀಲನಾಧಿಕಾರಿಯು ಅನುಮತಿಸಿದ ಅವಧಿಯ ಅಥವಾ ಅಪೀಲಿನ ಸಂದರ್ಭದಲ್ಲಿ ಅಪೀಲು ಅಧಿಕಾರಿಯು ನಿರ್ದಿಷ್ಟಪಡಿಸಿದ ಅವಧಿಯ ಮುಕ್ತಾಯದ ದಿನಾಂಕ
11. ನಿಯಮಿಸಲಾದ ಕ್ರಮಗಳನ್ನು ಅಧಿಭೋಗದಾರನು ಕಾರ್ಯಗತಗೊಳಿಸಿರುವನೇ ಅಥವಾ ಪರಿಶೀಲನಾಧಿಕಾರಿಯು ಕಾರ್ಯಗತಗೊಳಿಸಿರುವನೇ ಮತ್ತು ಪರಿಶೀಲನಾಧಿಕಾರಿಯು ಕಾರ್ಯಗತಗೊಳಿಸಿರುವಲ್ಲಿ ಕಾರ್ಯಗತಗೊಳಿಸಿದ ದಿನಾಂಕ
12. ಷರಾ.

## ನಮೂನೆ - 5
(3ನೇ ನಿಯಮವನ್ನು ನೋಡಿ)

1. ಗ್ರಾಮ
2. ಸರ್ವೆ ಮತ್ತು ಉಪ-ವಿಭಾಗದ ಸಂಖ್ಯೆ
3. ಅಧಿಭೋಗದಾರನ ಹೆಸರು
4. ಕ್ರಮವನ್ನು ಕಾರ್ಯಗತಗೊಳಿಸಲು ಪರಿಶೀಲನಾಧಿಕಾರಿಯು ನೀಡಿದ ನೋಟೀಸಿನ ಸಂ. ಮತ್ತು ದಿನಾಂಕ
5. ಪರಿಶೀಲನಾಧಿಕಾರಿಯು ಪರಿಹಾರ ಕ್ರಮಗಳನ್ನು ಕಾರ್ಯಗತಗೊಳಿಸಿದ ದಿನಾಂಕ
6. ತೆಗೆದುಕೊಂಡ ಕ್ರಮದ ಖರ್ಚುಗಳ ವಿವರಗಳು
7. ಡೆಪ್ಯುಟಿ ಕಮಿಷನರ್, ಡಿ.ಡಿ.ಎ ಮತ್ತು ತಹಸೀಲ್ದಾರರ ಕಚೇರಿಗೆ ತಗಾದೆ ನೋಟೀಸನ್ನು ರವಾನೆ ಮಾಡಿದ ದಿನಾಂಕ
8. ತಹಸೀಲ್ದಾರರ ಕಚೇರಿಯಿಂದ ತಗಾದೆ ನೋಟೀಸಿನ ಪ್ರತಿಯನ್ನು ಪಡೆದ ದಿನಾಂಕ
9. ಷರಾ.

## [1][ನಮೂನೆ - 6
### [3(5)ನೇ ನಿಯಮವನ್ನು ನೋಡಿ]

ಕರ್ನಾಟಕ ಕೃಷಿ ಸಂಬಂಧಿ ಕೀಟಗಳು ಮತ್ತು ರೋಗಗಳ ಅಧಿನಿಯಮ, 1968ರ 10ನೇ ಪ್ರಕರಣದ ಮೇರೆಗೆ ಭೂಕಂದಾಯದ ಬಾಕಿಯಂತೆ ವಸೂಲುಮಾಡಬಹುದಾದ ಮತ್ತು 7ನೇ ಅಥವಾ 9ನೇ ಪ್ರಕರಣಗಳ ಮೇರೆಗೆ ಕೈಗೊಂಡ ಪ್ರತಿಬಂಧಕ ಅಥವಾ ಪರಿಹಾರದ ಕ್ರಮಗಳ ವೆಚ್ಚದ ತಗಾದೆ ತಃಖ್ತೆ][1]

---

---

1. 6ನೇ ನಮೂನೆಯನ್ನು ಜಿಎಸ್‌ಆರ್ 294, ದಿನಾಂಕ: 29.9.1980ರ ಮೂಲಕ 9.10.1980 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

* * *

The above translation of the Karnataka Agricultural Pests and Diseases Act, 1968 (Karnataka Act 1 of 1969) and the Karnataka Agricultural Pests and Diseases Rules, 1971 shall be authoritative text in the Kannada Language under section 5A of the Karnataka Official Language Act, 1963 (Karnataka Act 26 of 1963).

GOVERNOR OF KARNATAKA

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಜಿ.ಕೆ. ಬೋರೇಗೌಡ**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನಾ ಇಲಾಖೆ

ಪಿ.ಆರ್. 829